ಪ್ಯಾಂಟಿನ ಜೇಬಿಗೆ ಕೈ ಹಾಕಿ ಮುಖ ಒರೆಸಿಕೊಂಡ. ಅವನ ಗಡ್ಡ ಬಲು ಪೊಗದಸ್ತಾಗಿತ್ತು. ಆಕರ್ಷಕವಲ್ಲ. ಒಂಥರಾ ದಿನಾ ದುಡಿದು ಬಸವಳಿದ ಮುಖ ಅದು. ಅದಕ್ಕೊಂದು ತೃಪ್ತಿಯ, ಅಷ್ಟೇ ಆತಂಕದ ಕಳೆ ಇತ್ತು.

'ಮನೆಗೆ ಬಾರೋ, ಇಲ್ಲೇ ಬಲ್ಲಾಳ್ ಪಕ್ಕ' ಎಂದವನು ನನ್ನನ್ನು ಎತ್ತಾಕಿಕೊಂಡೇ ಹೋದ. ಅವನ ಮನೆ ಚಿಕ್ಕದು. ಟಿವಿಎಸ್ ನಿಲ್ಲುತ್ತಿದ್ದಂತೆ, ಮನೆಯೊಳಗಿಂದ ಹೊರಗೆ ತಲೆ ಹಾಕಿದಾಕೆ ಅವನ ಹೆಂಡತಿಯೇ. ಅವಳ ಮುಖದಲ್ಲಿ ನನ್ನ ಬಗ್ಗೆ ಅಚ್ಚರಿ ಇತ್ತು.

'ವತ್ಸಲಾ, ಇದು ಯಾರು ಗೊತ್ತಾ?' ಎಂದ. ಮನೆಯೊಳಗೆ ನನ್ನನ್ನೂ ದಬ್ಬಿ ಕುರ್ಚಿಯಲ್ಲಿ ಕೂರಿಸುತ್ತಾ.

ಅವಳಿಗೆ ಹೇಗೆ ಗೊತ್ತಿರಬೇಕು?

'ಅದೇ ಕೇಪಿ ಅಂತಿದ್ನಲ್ಲಾ, ಅವನೇ' ಎಂದ

ಅವಳ ಮುಖ ವಿಚಿತ್ರವಾಗಿ ಅರಳಿತು.

'ನನ್ನ ಬಗ್ಗೆ ಏನು ಹೇಳಿದಾನೆ?' ಎಂದು ಕೇಳಿದೆ ಸಹಜವಾಗಿ.

'ತುಂಬಾ ಹೇಳಿದಾರೆ...' ಎಂದು ಆಕೆ ಸ್ನೇಹದಲ್ಲಿ ಹೇಳಿ, 'ಇರಿ, ಊಟಕ್ಕೆ ಇಡ್ತೀನಿ' ಎಂದು ಒಳಗೆ ಹೋದಳು

ಮನೆಯೆಂದರೆ ತೀರಾ ಪುಟ್ಟ ಮನೆ. ಹೊರಗಿನ ಹಾಲ್‌ನಲ್ಲೇ ಬಟ್ಟೆ ನೇತು ಹಾಕುವ ಪೆಗ್. ಅದರಲ್ಲಿ ಮಧುವಿನ ಮೂರ್ನಾಲ್ಕು ಅಂಗಿಗಳು ಬಾವಲಿಯಂತೆ ನೇತು ಬಿದ್ದಿದ್ದವು. ಗೋಡೆಗೆ ಅಂಟಿದಂತೆ ಕಟ್ಟಿದ್ದ ನೈಲಾನು ಹಗ್ಗದಲ್ಲಿ ಚೆಡ್ಡಿ, ಬನಿಯನ್, ಮಕ್ಕಳ ಅಂಗಿ, ಎಲ್ಲಾ ನೇತು ಬಿದ್ದಿದ್ದವು. ಸ್ಕ್ರೀನ್ ಗಾಳಿಗೆ ಅಷ್ಟು ಹಾರಿದ್ದೇ ಕಣ್ಣು ಒಳಗಿನ ಕೋಣೆಯನ್ನು ಅನಾವರಣಗೊಳಿಸಿತ್ತು. ಮಂಚ, ಅದರ ಮೇಲೆ ಅಕ್ಕಪಕ್ಕ ಪೂರಾ ಬಟ್ಟೆ, ಮಕ್ಕಳ ಬ್ಯಾಗ್, ಏನೇನೋ ಸರಂಜಾಮು.

ಏಗುವ ಪಡಿಪಾಟಲು ಕಣ್ಣಿಗೆ ಚುಚ್ಚುವಂತಿತ್ತು. ಊಟವೆಂದರೆ... ಅನ್ನ ತಿಳಿಸಾರು, ಮಜ್ಜಿಗೆಯ ಸಂಕೋಚದ ಊಟ. ಬಡಿಸುವ ಪಾತ್ರೆಯಿಂದ ಹಿಡಿದು, ಕುಡಿಯುವ ಲೋಟದವರೆಗೆ ಮಾಸಿದ ಬಾಳು ಕಣ್ಣಿಗೆ ಗಿಡಿಯುತ್ತಿತ್ತು. ಅಸಲಿಗೆ ಅವನು ಸಿಕ್ಕಿದ್ದೇ ಅಚಾನಕ. ಈ ಊಟವೂ ಅಷ್ಟೆ.

ಊಟವಾಗಿದ್ದೇ ನಾನು ಯಾವ ಮುಜುಗರವೂ ಇಲ್ಲದೇ 'ನಾನೊಂದಷ್ಟು ಹೊತ್ತು ಮಲಗಬೇಕಿದೆ ಮಾರಾಯಾ' ಎಂದೆ. ಆಕೆ, ಗಡಿಬಿಡಿಯಲ್ಲಿ, ಒಳ ಕೋಣೆಗೆ ಹೋಗಿ ಅಲ್ಲಿನ ಸಾಮಾನೆಲ್ಲಾ ಎತ್ತಿಟ್ಟು ಅಲ್ಲೊಂದಷ್ಟು ಜಾಗ ಹೊಂದಿಸಿ, 'ಬನ್ನಿ' ಎಂದು ಮುಜುಗರದಲ್ಲೇ ಹೇಳಿದಳು. ನಾನು ಜೂಕರಿಸುತ್ತಿದ್ದಾಗ ಗಂಡ-ಹೆಂಡತಿ ಅದೇನೋ ಗುನಗುನು ಮಾತಾಡುತ್ತಿದ್ದರು. ಆಕೆ ಅದೇನೋ ಆಕ್ಷೇಪದ ದನಿಯಲ್ಲಿ ಹೇಳುತ್ತಿದ್ದರೆ, ಮಧು ಸಮಜಾಯಿಷಿ ನೀಡುತ್ತಿದ್ದ ಹಾಗಿತ್ತು.

ನಾನು ಎದ್ದು ಮುಖ ತೊಳೆದು ಕೂರುವಷ್ಟರಲ್ಲಿ ಆಕೆ ಕಾಫಿ ತಂದು ಕೊಟ್ಟಳು.

ಮಧು, 'ಕೂತಿರು, ಬಂದೆ' ಎಂದು ಎದ್ದು ಹೋದ. ಅವನ ಟಿವಿಎಸ್‌ನ ಕೊರ ಕೊರ ಸದ್ದು ದೂರವಾಯಿತು.

'ಮಕ್ಕಳು ಏನು ಮಾಡ್ತಿದಾರೆ?' ಎಂದು ಕೇಳಿದೆ.

'ಮಗ ಐಟಿಐ ಮಾಡಿದಾನೆ ಸಾರ್, ಪ್ರವೀಣ್ ಫ್ಯಾಕ್ಟರಿಲಿ ಕೆಲ್ಸ ಮಾಡ್ತಿದಾನೆ. ಮಗಳು ಬಿಎಸ್ಸಿ ಓದ್ತಿದಾಳೆ' ಅಂದಳು.

ನನಗೆ ಮುಂದೆ ಏನು ಕೇಳಬೇಕೆಂದು ಗೊತ್ತಾಗಲಿಲ್ಲ.

ಆಕೆಯೇ, 'ನೀವು ಏನ್ಮಾಡ್ತಿದೀರಿ ಸಾರ್, ಅವರು ನಿಮ್ ಬಗ್ಗೆ ಹಿಂದೆ ಹೇಳ್ತಾ ಇದ್ರು. ನೀವು ಭೆಟ್ಟಿ ಮಾಡ್ಲೇ ಇಲ್ಲ ಅನ್ಸತ್ತೆ ಅಲ್ವಾ ಇತ್ತೀಚೆಗೆ' ಅಂದಳು.

'ಹು' ಎಂದು ತಲೆ ಆಡಿಸಿದೆ.

'ಅವರ ಫ್ರೆಂಡ್ಸ್ ಯಾರೂ ಹೆಚ್ಚಿಗೆ ಭೆಟ್ಟಿ ಆಗಿಲ್ಲ, ಮನೆಗೂ ಬಂದಿಲ್ಲ, ಕುಮಾರ್ ಅನ್ನೋರು ಬಿಟ್ಟು' ಎಂದಳು.

ಧಿಗ್ಗನೆ ಎದೆಗೆ ಒದ್ದಂತಾಯ್ತು.

'ಕುಮಾರ್... ಕುಮಾರ್ ಮನೆಗೆ ಬಂದಿದ್ನೇ?'

'ಹು ಸಾರ್, ನಮ್ ಕತೆ ರಾಮಾಯಣ... ಹಿಡಿ ಬಾಳುವೆ ಆಗೋಯ್ತು ಸಾರ್' ಎಂದವಳೇ ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಏಕಾಏಕಿ ಈ ರಸ ಬದಲಾವಣೆ ನನ್ನನ್ನು ದಿಕ್ಕೆಡಿಸಿತು.

'ಯಾಕಮ್ಮಾ?' ಎಂದು ಸೋತ ಉಸಿರಲ್ಲಿ ಹೇಳಿದೆ. ಯಾವ ದುಃಖ, ನೋವು ತುಂಬಿಕೊಂಡಿದೆಯೋ ಎಂಬುದೆಲ್ಲಾ ಹಳಸಲು. ಸುಖ-ದುಃಖದ ಒತ್ತಡ ಇದ್ದರಷ್ಟೇ ಇನ್ನೊಬ್ಬರಲ್ಲಿ ಹೇಳುವ ಉಮೇದು ಬರೋದು.

'ಇವ್ರು ಏನೂ ಹೇಳಿಲ್ವಾ?' ಎಂದಳು ಕೊಂಚ ಹಿಂಜರಿಕೆಯಲ್ಲಿ.